## ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ

**ಸಿ.ಸಿ. ನಂ.2168/2025**

| | | |
|---|---|---|
| ಸಾಕ್ಷಿದಾರರ ಹೆಸರು | ವಿಶಾಲ | ಸಿ.ಡಬ್ಲ್ಯು-1 |
| ಗಂಡನ ಹೆಸರು | ರಘು | ಪಿ .ಡಬ್ಲ್ಯೂ-1 |
| ವಯಸ್ಸು | 36 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ಗೃಹಿಣಿ | ದಿನಾಂಕಃ |
| ವಾಸಃ | ಬಿ.ಕೆ ರಸ್ತೆ, ಗಾಂಧಿ ನಗರ, ಸಾಗರ | 09.06.2026 |

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

**1.** ಚಾ.ಸಾ 2 ನನ್ನ ಗಂಡ. ಚಾ.ಸಾ 3 ಮತ್ತು 4 ನನ್ನ ಮಕ್ಕಳು. ಚಾ.ಸಾ 5 ರಿಂದ 7 ಗೊತ್ತು. ಆರೋಪಿತರು ನನ್ನ ತಂಗಿ ಮತ್ತು ತಂಗಿಯ ಗಂಡ.

**2.** ದಿನಾಂಕ 17.07.2025 ರಂದು ನಮ್ಮ ಮತ್ತು ಆರೋಪಿತರ ನಡುವೆ ಮಕ್ಕಳ ವಿಚಾರದಲ್ಲಿ ಮನಸ್ತಾಪ ಉಂಟಾಯಿತು. ಆಗ ಆರೋಪಿತರಿಗೆ ತಿಳುವಳಿಕೆ ಹೇಳುವಂತೆ ನಾನು ಪೋಲಿಸ್ ಠಾಣೆಗೆ ಹೋಗಿದ್ದು, ಪೋಲಿಸರ ಕೋರಿಕೆಯ ಮೇರೆಗೆ ಅವರು ಸೂಚಿಸಿದಂತೆ ನಾನು ನನ್ನ ಹೇಳಿಕೆಯನ್ನು ಬರೆದುಕೊಟ್ಟಿದ್ದೇನೆ. ದಿನಾಂಕ 21.07.2025 ರಂದು ಪೋಲಿಸರು ನಮ್ಮ ಮನೆಯ ಹತ್ತಿರ ಬಂದು 2 ದಾಖಲೆಗಳಿಗೆ ನನ್ನ ಸಹಿಗಳನ್ನು ಪಡೆದುಕೊಂಡು ಪೋಟೋ ತೆಗೆದುಕೊಂಡು ಹೋದರು. ಉಳಿದ ಯಾವುದೇ ಮಾಹಿತಿ ಈ ಘಟನೆಗೆ ಸಂಬಂಧಪಟ್ಟಂತೆ ನನಗೆ ತಿಳಿದಿರುವುದಿಲ್ಲ. ಆದ್ದರಿಂದ ಈ ಕೇಸನ್ನು ಮುಕ್ತಾಯ ಮಾಡಬೇಕೆಂದು ಕೋರುತ್ತೇನೆ.

**3.** ಹೇಳಿಕೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು, ಸ್ಥಳ ಪಂಚನಾಮೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು, ನಕ್ಷೆಯನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು, ಎರಡು ಪೋಟೋಗಳನ್ನು ನಿಪಿ-4 ಮತ್ತು ನಿಪಿ-5 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು, ಅನುಮತಿಯನ್ನು ನೀಡಲಾಯಿತು.)

**ಪಾಟೀ ಸವಾಲುಃ  ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

**4.** ದಿನಾಂಕ 17.07.2025 ರಂದು ನಮ್ಮ ಮನೆಯ ಮುಂಭಾಗದ ಕಾಲುದಾರಿಯಲ್ಲಿ ರಾತ್ರಿ 09.15 ಗಂಟೆಗೆ ಚಾ.ಸಾ 3 ಮತ್ತು 4 ರವರು ಹೋಗುತ್ತಿದ್ದರು ಎಂದರೆ ಸರಿ. ಆಗ 1 ನೇ ಆರೋಪಿತನು ಚಾ.ಸಾ 3 ಮತ್ತು 4 ರವರನ್ನು ಎಲ್ಲಿಗೆ ಹೊರಟಿದ್ದೀರಿ ಎಂದು ಮಾತನಾಡಿಸಿದರು ಎಂದರೆ ಸರಿ. ಏನು ಮಾತನಾಡುತ್ತೀರಿ ಎಂದು ನಾನು ಮತ್ತು ಚಾ.ಸಾ 2 ರವರು 1 ನೇ ಆರೋಪಿತನನ್ನು ಕೇಳಿದಾಗ 1 ಮತ್ತು 2 ನೇ ಆರೋಪಿತರು ನಮ್ಮೊಂದಿಗೆ ಜಗಳ ಮಾಡಿ ನನಗೆ ಮತ್ತು ಚಾ.ಸಾ 2 ರಿಂದ 4 ರವರಿಗೆ ಅವಾಚ್ಯವಾಗಿ ಬೈಯ್ದು, ಹಲ್ಲೆ ಮಾಡಿ ಗಾಯ ಪಡಿಸಿದ್ದಲ್ಲದೇ ನಮಗೆ ಜೀವ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಈ ವಿಚಾರವಾಗಿ ನಾನು ನಿಪಿ-1 ರಂತೆ ನೀಡಿದ ದೂರಿನ ಮೇರೆಗೆ ದಿನಾಂಕ 21.07.2025 ರಂದು ಪೋಲಿಸರು ಘಟನಾ ಸ್ಥಳಕ್ಕೆ ಬಂದು ಚಾ.ಸಾ 6 ಮತ್ತು 7 ರವರ ಸಮಕ್ಷಮ ನಾನು ತೋರಿಸಿದ ಸ್ಥಳದಲ್ಲಿ ಸ್ಥಳ ಪಂಚನಾಮೆ ಮಾಡಿ, ನಕ್ಷೆ ತಯಾರಿಸಿ, ಫೋಟೋ ತೆಗೆದರು ಎಂದರೆ ಸರಿಯಲ್ಲ. ಘಟನೆಯ ವಿಚಾರವಾಗಿ ದಿನಾಂಕ 21.07.2025 ರಂದು ಈಗ ಓದಿ ಹೇಳಿದಂತೆ ಮರು ಹೇಳಿಕೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ತನ್ನ ಹೇಳಿಕೆಗೆ ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ ಸದರಿ ಹೇಳಿಕೆಯನ್ನು ನಿಪಿ-6 ಎಂದು ಗುರುತಿಸಲಾಯಿತು.  ನಿಪಿ-2 ರ ಕಾಲಕ್ಕೆ ನ್ಯಾಯಾಲಯದ ಮುಂದೆ ನಾನು ಈಗ ನೋಡುತ್ತಿರುವ ಮರದ ರೀಪರ್ ಅನ್ನು ಪೋಲಿಸರು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ.

**5.** ಆರೋಪಿತರು ಈ ಘಟನೆಯ ಕಾಲಕ್ಕೆ ನಮ್ಮ ವಿರುದ್ಧ ಪ್ರತಿದೂರನ್ನು ದಾಖಲು ಮಾಡಿದ್ದಾರೆ ಎಂದರೆ ಸರಿ. ನಾವು ಮತ್ತು ಆರೋಪಿತರು ಸಂಬಂಧಿಕರಾಗಿರುವುದರಿಂದ ಪರಸ್ಪರ ರಾಜೀ ಮಾಡಿಕೊಂಡಿದ್ದೇವೆ ಎಂದರೆ ಸರಿ. ಆದ್ದರಿಂದ ಈ ಪ್ರಕರಣದ ಎಲ್ಲಾ ಮಾಹಿತಿ ನನಗೆ ತಿಳಿದಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ  ಆರೋಪಿತನ ಪರ ವಕೀಲರಾದ ಶ್ರೀ. ಎಂ.ಬಿ.ಜಿ ರವರಿಂದಃ-**

ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಸಾಗರ.